ಕರ್ನಾಟಕ ಸರಕಾರ

ಜಿಲ್ಲಾ ಪಂಚಾಯತ್ ಸಾರ್ವಜನಿಕ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಕೊಪ್ಪ.

ಸಂ: ಎ1/ಸಾ.ಶಿ.ಇ/ಪೂಪ್ರಾ, ಪ್ರಾಶಾ ನೋಂ/46/03-04 ದಿ:12/3/2004

ನಮೂನೆ – 02

[ನಿಯಮ 32 ರ ಉಪನಿಯಮ]

ಪ್ರಮಾಣ ಪತ್ರ ಸಂಖ್ಯೆ : 01/2003-04 ದಿ:12/3/2004

ದೀಪ್ತಿ ವಿದ್ಯಾಸಂಸ್ಥೆ ನರಸಿಂಹರಾಜಪುರ ತಾಲೂಕು ಚಿಕ್ಕಮಗಳೂರು ಜಿಲ್ಲೆ, ಇವರ ಗವರ್ನಿಂಗ್ ಕೌನ್ಸಿಲ್ ಕರ್ನಾಟಕ ಶಿಕ್ಷಣ ಕಾಯ್ದೆ 1983 [ಕರ್ನಾಟಕ ಆಕ್ಟ್ ಸಂಖ್ಯೆ 1/1993] ನೇ ಸೆಕ್ಷನ್ 37ರಂತೆ 2004ನೇ ಮಾರ್ಚ್ 12ನೇ ದಿನಾಂಕದಂದು ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆ ನಡೆಸಲು ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

1. ಕ್ರಮಸಂಖ್ಯೆ : 02/2003-04.
2. ಶಾಲೆಯ ಹೆಸರು : ನೋರ್ಬರ್ಟ್ ಕಿರಿಯ ಪ್ರಾಥಮಿಕ ಶಾಲೆ, ವಿದ್ಯಾನಗರ, ಕೊಪ್ಪ ಪಾ ಚಿಕ್ಕಮಗಳೂರು ಜಿ.
3. ಅನುಮತಿ ನೀಡಿದ ತರಗತಿಗಳು : 1 ರಿಂದ 5 ನೇ ತರಗತಿ..
4. ಪ್ರಾರಂಭಿಸಬೇಕಾದ ಶೈಕ್ಷಣಿಕ ವರ್ಷ : 2004-05.
5. ಪ್ರಾರಂಭಿಸಲು ಅನುಮತಿ ನೀಡಿದ ಮಾಧ್ಯಮ : ಕನ್ನಡ ಮಾಧ್ಯಮ.
6. ಶುಲ್ಕ ಪಾವತಿ ವಿವರ : ರೂ.5000/-
   ಬ್ಯಾಂಕ್ ಹುಂಡಿ ಸಂಖ್ಯೆ: 684530 ದಿ:30/10/2003
   ಎಸ್.ಬಿ.ಎಂ ನರಸಿಂಹರಾಜಪುರ ಶಾಖೆ.

ಸದರಿ ಶಿಕ್ಷಣಸಂಸ್ಥೆಯನ್ನು ಕ್ರಮ ಸಂಖ್ಯೆ: 02 ; ಪುಟ ಸಂಖ್ಯೆ: 10ರಲ್ಲಿ ನೋಂದಣಿ ವಹಿಯಲ್ಲಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೋಂದಾಯಿಸಲಾಗಿದೆ.

ಷರತ್ತುಗಳು :–

1] ಈ ನೋಂದಣಿಯು ನಿಯಮ 3ರ ಉಪನಿಯಮ 4 ಮತ್ತು 5ಕ್ಕೆ ಹಾಗೂ ಕರ್ನಾಟಕ ಶಿಕ್ಷಣ ಸಂಸ್ಥೆಗಳ ನೋಂದಣಿ ಮತ್ತು ವರ್ಗೀಕರಣ 1997ರ ಉಪನಿಯಮಗಳಿಗೆ ಒಳಪಟ್ಟಿರುತ್ತದೆ.

2] ಗೌರ್ನಿಂಗ್ ಕೌನ್ಸಿಲ್ ನಿಯಮ 4[4] ರಲ್ಲಿ ತಿಳಿಸಿರುವಂತೆ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

3] ಶಾಲಾ ನಿವೇಶನದ ವಿಸ್ತೀರ್ಣ, ಕಟ್ಟಡ, ಪಾಠೋಪಕರಣ, ಪೀಠೋಪಕರಣಗಳು, ಸಿಬ್ಬಂದಿವರ್ಗ, ಆರ್ಥಿಕ ಅನುಕೂಲತೆಗಳು, ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

4] ಸದರಿ ಶಿಕ್ಷಣ ಸಂಸ್ಥೆಯು ಯಾವದೇ ಸಂದರ್ಭದಲ್ಲಿಯೂ ಸರಕಾರದ ಪೂರ್ವಾನುಮತಿ ಇಲ್ಲದೇ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.

5] ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ನೋಂದಾಯಿಸಲಾದ ಸ್ಥಳದಲ್ಲಿಯೇ ತೆರೆಯತಕ್ಕದ್ದು. ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆಗೆ ಅವಕಾಶ ಇರುವುದಿಲ್ಲ.

6] ಯಾವ ಆಡಳಿತಮಂಡಳಿಗೆ ಶಾಲೆಯನ್ನು ನಡೆಸಲು ನೋಂದಾಯಿಸಲಾಗಿದೆಯೋ ಅದೇ ಆಡಳಿತಮಂಡಳಿಯು ಶಾಲೆಯನ್ನು ನಡೆಸತಕ್ಕದ್ದು.

7] ಸರಕಾರ ಆದೇಶ ಸಂಖ್ಯೆ:28 ಬಿಜಿಸಿ/94 ದಿ:29-04-1994 ಹಾಗೂ 1 ರಿಂದ 5ನೇ ತರಗತಿಯವರೆಗೆ ಕನ್ನಡಭಾಷಾ ನೀತಿ ನಿಯಮವ ಕಡ್ಡಾಯವಾಗಿ ಪಾಲಿಸತಕ್ಕದ್ದು ಒಂದು ಮೇಳೆ ಭಾಷಾ ನೀತಿ ನಿಯಮ ಉಲ್ಲಂಘನೆ ಮಾಡಿರುವುದಾಗಿ ಕಂಡುಬಂದಲ್ಲಿ ಶಾಲೆಯ ನೋಂದಣಿಯನ್ನು ರದ್ದುಪಡಿಸಲಾಗುವುದು.

8] ಸರಕಾರದ ಅಧಿಸೂಚನೆ ಇಡಿ 175 ಸಿಎಂಸಿ 95 ದಿ:07-09-1998 ಮತ್ತು ಸರಕಾರದ ಅಧಿಸೂಚನೆ ಸಂ:175 ಸಿಎಂಸಿ 97 ದಿ:29-12-1 ರಂತೆ ಶಾಶ್ವತ ಅನುದಾನರಹಿತ ಶಾಲೆಯೆಂದು ಪರಿಗಣಿಸಿ ನೋಂದಾಯಿಸಿದೆ.

9] ರೂ.20,000/– ಸಂಸ್ಥೆಯ ಕಾರ್ಯದರ್ಶಿ ಹಾಗೂ ಕ್ಷೇತ್ರಶಿಕ್ಷಣಾಧಿಕಾರಿಗಳ ಜಂಟಿ ಖಾತೆಯಲ್ಲಿ ಸ್ಥಿರನಿಧಿಯನ್ನು ಇಡತಕ್ಕದ್ದು.

10] ಶಾಲೆಯು ಪ್ರಾರಂಭಿಸಿದ ಎರಡು ತಿಂಗಳೊಳಗಾಗಿ ಪ್ರಥಮ ಮಾನ್ಯತೆಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

11] ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ಪಾಲಿಸತಕ್ಕದ್ದು.

12] ಇಲಾಖಾ ನಿಯಮಾನುಸಾರ ಅರ್ಹ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ನೇಮಿಸತಕ್ಕದ್ದು.

13] ವಿದ್ಯಾರ್ಥಿಗಳ ಪಾಲಿಲಾತಿಯಲ್ಲಿ ಹಾಗೂ ಶಿಕ್ಷಕರ ನೇಮಕಾತಿಯಲ್ಲಿ ಕಡ್ಡಾಯವಾಗಿ ಮೀಸಲಾತಿ ನಿಯಮ ಪಾಲಿಸತಕ್ಕದ್ದು.

14] ಕರ್ನಾಟಕ ಶಿಕ್ಷಣ ಮಸೂದೆಯ ಅನುಚ್ಛೇದದ ಅಡಿಯಲ್ಲಿ ಉಪಬಂಧ 36 ರಿಂದ 39 ರಲ್ಲಿ ವಿವರಿಸಿದ ಎಲ್ಲಾ ಅಂಶಗಳನ್ನು ಪಾಲಿಸುವುದು.

15] ಶಾಲೆ ಪ್ರಾರಂಭಿಸಲಾದ ಬಗ್ಗೆ ಅಗತ್ಯ ಮಾಹಿತಿಯು ನೋಂದಣಿ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು ಒಂದು ವೇಳೆ ಶಾಲೆ ಪ್ರಾರಂಭಿಸದಿದ್ದಲ್ಲಿ ಕಾರಣಗಳೊಂದಿಗೆ ವರದಿ ಮಾಡುವುದು. ಯಾವುದೇ ಕಾರಣಕ್ಕೂ ಪ್ರಾರಂಭಿಸಲು ನೋಂದಾಯಿಸಲಾದ ವರ್ಷ ಹೊರತು. ಬೇರೆ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭಿಸಬಾರದು. ಮಾಡಿದಲ್ಲಿ ಅನಧಿಕೃತ ಶಾಲೆಯೆಂದು ಪರಿಗಣಿಸಿ, ಆಡಳಿತಮಂಡಳಿಯ ಮೇಲೆ ಕ್ರಿಮಿನಲ್ ದಾವೆ ಹೂಡಲಾಗುವುದು.

16] ಕರ್ನಾಟಕ ಶಿಕ್ಷಣಮಸೂದೆ ನಿಯಮಗಳನ್ವಯ ಪೆಬ್ರುವರಿ ಶುಲ್ಕ ಮತ್ತು ವಂತಿಗೆ ವಸೂಲಾತಿ ಮಾಡಬಾರದು. ನಿಯಮ ಉಲ್ಲಂಘನೆ ಮಾಡಿ ವಂತಿಗೆ/ಪೆಬ್ರುವರಿಶುಲ್ಕ ವಸೂಲಾತಿ ಮಾಡುತ್ತಿರುವ ಬಗ್ಗೆ ಇಲಾಖೆಯ ಗಮನಕ್ಕೆ ಬಂದಲ್ಲಿ ನೋಂದಣಿ ರದ್ದು ಪಡಿಸಲಾದಿಸಲಾಗುವುದು.

17] ಇಲಾಖೆ ನಿಗದಿಪಡಿಸಿದ ಪಠ್ಯಕ್ರಮವನ್ನು ಕಡ್ಡಾಯವಾಗಿ ಪಾಲಿಸುವುದು.

18] ಕರ್ನಾಟಕ ಶಿಕ್ಷಣ ಕಾಯ್ದೆ 1983 [ಕರ್ನಾಟಕ ಆಕ್ಟ್ 1-95] ಹಾಗೂ ಕರ್ನಾಟಕ ಶಿಕ್ಷಣ ಸಂಸ್ಥೆಗಳ ಕ್ಲಾಸಿಫಿಕೇಶನ್, ರೆಗ್ಯುಲೇಷನೇ, ಅಂಡ್ ಪ್ರಿಸ್ಕ್ರಿಪ್ಷನ್ ಆಫ್ ಕರ್ರಿಕ್ಯುಲರ್ ಇತರೆ ನಿಯಮ1995 ಮತ್ತು ಕರ್ನಾಟಕ ಶಿಕ್ಷಣ ಸಂಸ್ಥೆಗಳ [ಮಾನ್ಯತೆ ಮತ್ತು ನೋಂದಣಿ] ನಿಯಮಗಳು 1997 ನಿಯಮಗಳಿಗೆ ಒಳಪಟ್ಟಿರುತ್ತದೆ.

ಕ್ಷೇತ್ರಶಿಕ್ಷಣಾಧಿಕಾರಿಗಳು [ಪ್ರಾಥಮಿಕ ಶಿಕ್ಷಣ ಸಹಾಯಕ ನಿರ್ದೇಶಕರು]
ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆ.
ಚಿಂತಾಮಣಿ ತಾಲೂಕು.

ಗೆ.
ಕಾರ್ಯದರ್ಶಿಗಳು, ದೀಪ್ತಿ ಶಿಕ್ಷಣಸಂಸ್ಥೆ,
ನರಸಿಂಹರಾಜಪುರ ತಾಲೂಕು, ಚಿಕ್ಕಮಗಳೂರು ಜಿಲ್ಲೆ.

ಪ್ರತಿಯನ್ನು,
1] ಮಾನ್ಯ ನಿರ್ದೇಶಕರು [ಪ್ರಾಥಮಿಕಶಿಕ್ಷಣ] ಸಾರ್ವಜನಿಕ ಶಿಕ್ಷಣ ಇಲಾಖಾ ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಬೆಂಗಳೂರು - 560001
ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2] ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3] ಕಛೇರಿ ಪ್ರತಿ

ಕರ್ನಾಟಕ ಸರ್ಕಾರ

ಜಿ.ಪಂ. ತಾ.ಪಂ. ಸಾರ್ವಜನಿಕ ಶಿಕ್ಷಣ ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಕೊಪ್ಪ

ಸಂಖ್ಯೆ:ಎ5:ಸಾಶಿಇ:ಮಾ.ನ. /06-07 ದಿನಾಂಕ:05/03/05

ಜ್ಞಾಪನ

ವಿಷಯ: ನೋರ್ಬರ್ಟ್ ಕರಿಯ ಪ್ರಾಥಮಿಕ ಶಾಲೆ,ವಿದ್ಯಾನಗರ, ಕೊಪ್ಪ ತಾಲ್ಲೂಕು
ಈ ಶಾಲೆಯ ಪ್ರಥಮ ಮಾನ್ಯತೆ/ಮಾನ್ಯತೆ ನವೀಕರಿಸುವ ಬಗ್ಗೆ.

ಉಲ್ಲೇಖ: 1. ಸಂಸ್ಥೆಯವರ ಮನವಿ ಪತ್ರ ಸಂಖ್ಯೆ: 18.01.2005
2. ಕಸಬ ಶಿಕ್ಷಣ ಸಂಯೋಜಕರ ಭೇಟಿ ವರದಿ ದಿನಾಂಕ:17.02.05

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಸಂತ ಜೋಸೆಫರ (ಅನುದಾನ ರಹಿತ) ಕಿರಿಯ ಪ್ರಾಥಮಿಕ ಶಾಲೆ ಕೊಪ್ಪ ಈ ಶಾಲೆ/ಸಂಸ್ಥೆಯ ಮಾನ್ಯತೆಯಲ್ಲಿ ಉಲ್ಲೇಖದ ವರದಿಯಂತೆ ಕೆಳಕಂಡಂತೆ ಹಾಗು ನಮೂದಿಸಿದ ಷರತ್ತುಗಳಿಗೆ ಒಳಪಡಿಸಿ ನವೀಕರಿಸಿದೆ.

ಅವಧಿ	ಪ್ರಥಮ ಮಾನ್ಯತೆ/ಮಾನ್ಯತೆ ನವೀಕರಣ	ಮಾಧ್ಯಮ	ತರಗತಿ	ವಿಭಾಗ
2005-06	ಮಾನ್ಯತೆ ನವೀಕರಣ	ಕನ್ನಡ	1 ನೇ ತರಗತಿ	–
2005-06	ಪ್ರಥಮ ಮಾನ್ಯತೆ/	ಕನ್ನಡ	2 ನೇ ತರಗತಿ	

ಷರತ್ತುಗಳು:

1.ಸಾರಷ್ಯ ಕೊಕಡಿ ಮತ್ತು ಪಿಠೋಪಕರಣಗಳನ್ನು ಒದಗಿಸುವ ನಿಬಂಧನೆಗಳೊಂದಿಗೆ

2ಇಲಾಖ ಅನುಮತಿ ಇಲ್ಲದೆ ಮೇಲಿನ ತರಗತಿಗೆ ಹೆಚ್ಚಿನ ವಿಭಾಗವನ್ನು ಪ್ರಾರಂಭಿಸ ಕೂಡದು.

3.26-09-99 ರ ನಿಯಮದಂತೆ ಟಿ.ಸಿ.ಹೆಚ್ ತರಬೇತಿಯನ್ನು ಹೊಂದಿದ ಶಿಕ್ಷಕರನ್ನೇ ಶಿಕ್ಷಣ ಮಸೂದೆಯ ನಿಯಮದಂತೆ ನೇಮಿಸಿಕೊಳ್ಳುವುದು.

4.ಎಲ್ಲಾ ವರ್ಗದ ಮಕ್ಕಳನ್ನು ಕಡ್ಡಾಯವಾಗಿ ನಿಯಮದಂತೆ ದಾಖಲಾತಿ ಮಾಡಿಕೊಳ್ಳುವುದು.

5.ನಿಗಧಿತ ಶಾಲಾ ಶುಲ್ಕವಲ್ಲದೆ ಯಾವುದೇ ಶುಲ್ಕ ಮತ್ತು ವಂತಿಕೆಗಳನ್ನು ಮಕ್ಕಳಿಂದಾಗಲಿ ಪೋಷಕರಿಂದಾಗಲಿ ಪಡೆಯ ಬಾರದು.

6.ಕನಿಷ್ಟ 40:50 ಮಕ್ಕಳ ದಾಖಲಾತಿ ಇರಲೇಬೇಕು ನಿಯಮಾನುಸಾರ ದಾಖಲಾತಿಗಳನ್ನು ಮುಂದಿನ ಸಾಲಿನಲ್ಲಿ ಹೆಚ್ಚಿಸಿಕೊಳ್ಳುವುದು.

7.ಆಡಳಿತ ಮಂಡಳಿಯ ನೊಂದಣಿಯನ್ನು ಸಂಬಂಧಪಟ್ಟ ಇಲಾಖೆಯಿಂದ ಪ್ರತಿ ವರ್ಷ ನವೀಕರಿಸಿಕೊಳ್ಳಬೇಕು.

8.ಶಾಲೆಯ ಫಲಿತಾಂಶವನ್ನು ಇಪ್ಪೂ ಉತ್ತಮಗೊಳಿಸಿಕೊಳ್ಳಬೇಕು.

9.ಈಗ ಮಾನ್ಯತೆ ನೀಡಿದಾಗ ಷರತ್ತುಗಳನ್ನು ಪೂರೈಸಿದ ಬಗ್ಗೆ ಮುಂದಿನ ಸಾಲಿನ ಮಾನ್ಯತೆ ನವೀಕರಣ ಸಂದರ್ಭದಲ್ಲಿ ದೃಢೀಕರಣ ನೀಡುವುದು. ದೃಢೀಕರಣ ನೀಡದಿದ್ದಲ್ಲಿ ಮಾನ್ಯತೆಯನ್ನು ರದ್ದುಪಡಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

10.1987-88 ಮತ್ತು ನಂತರದ ಅವಧಿಯಲ್ಲಿ ಪ್ರಾರಂಭವಾದ ಎಲ್ಲಾ ಶಾಲೆಯು ಶಾಶ್ವತ ಅನುದಾನ ರಹಿತ ವಾಗಿರುತ್ತದೆ.

11.ಕರ್ನಾಟಕ ಶಿಕ್ಷಣ ಸಂಸ್ಥೆಗಳ ಮಾನ್ಯತೆ ನಿಯಮ 1999 ಹಾಗು ಕರ್ನಾಟಕ ಶಿಕ್ಷಣ ಮಸೂದೆಯ 26,37,38 ನ್ನು ಪಾಲಿಸುವುದು.

12.ಕರ್ನಾಟಕ ಶಿಕ್ಷಣ ಸಂಸ್ಥೆಗಳ ಪಠ್ಯ ನಿರ್ವಹಣಾ ಕ್ರಮ ನಿಯಮ 1995 ರ ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸುವುದು.

13.ಯಾವುದೇ ಕಾರಣಕ್ಕೂ ನೊಂದಾವಣೆಯಲ್ಲಿ ಅನುಮತಿಸಿರುವ ಸ್ಥಳದಿಂದ ಶಾಲೆಯನ್ನು ಸ್ಥಳಾಂತರಿಸಬಾರದು.

14.ಶಾಲೆ ಪ್ರಾರಂಭಿಸುವಾಗ ನೀಡಿದ ನೊಂದಣಿ ಷರತ್ತನ್ನು ಪಾಲಿಸುವುದು.

15.ದಾಖಲಾತಿ/ಹಾಜರಾತಿ ಉತ್ತಮ ಪಡಿಸಿಕೊಳ್ಳುವುದು

16.ಸ್ಥಿರ ವಿಧಿಯಾಗಿ ರೂ.10,000/- ಗಳನ್ನು ಬಿ.ಇ.ಓ ಹಾಗೂ ಸಂಸ್ಥೆಯ ಜಂಟಿ ಲೆಕ್ಕದಲ್ಲಿ ಇಡಲಾಗಿದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಕೊಪ್ಪ ತಾ||ಚಿಕ್ಕಮಗಳೂರು ಜಿಲ್ಲೆ.

ಗೆ,
ಮುಖ್ಯ ಶಿಕ್ಷಕರು/ಕಾರ್ಯದರ್ಶಿಗಳು